ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10–30ಕ್ಕೆ ಸಮಾವೇಶಗೊಂಡಿತು.

ಹಂಗಾಮಿ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಹಂಗಾಮಿ ಅಧ್ಯಕ್ಷರ ಸ್ವಾಗತ.

ಹಂಗಾಮಿ ಅಧ್ಯಕ್ಷರು : ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳೇ. ಗೌರವಾನ್ವಿತ ಮಂತ್ರಿ ಮಂಡಲದ ಸದಸ್ಯರುಗಳೇ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೇ. ಜಾತ್ಯಾತೀತ ಜನತಾದಳದ ಶಾಸಕಾಂಕ ಪಕ್ಷದ ನಾಯಕರೇ. ಗೌರವಾನ್ವಿತ ಸದಸ್ಯರುಗಳೇ. ನೂತನವಾಗಿ ಈ ರಾಜ್ಯದ ಜನತೆಯ ಆಶೀರ್ವಾದವನ್ನು ಪಡೆದು ಈ ಗೌರವಾನ್ವಿತ 13ನೇ ವಿಧಾನಸಭೆಯ ಸದಸ್ಯರುಗಳಾಗಿರತಕ್ಕಂಥ ತಮ್ಮೆಲ್ಲರನ್ನು ಬಹಳ ಆತ್ಮೀಯವಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ತಮ್ಮೆಲ್ಲರಿಗೂ ಈ ಸಭೆಯಲ್ಲಿ ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನವನ್ನು ಬೋಧಿಸುವುದನ್ನು ಗೌರವಾನ್ವಿತ ರಾಜ್ಯಪಾಲರು ನನ್ನ ಪಾಲಿಗೆ ವಹಿಸಿದ್ದಾರೆ. ಪ್ರಜಾಪ್ರಭುತ್ವ ಸ್ಥಾಪನೆಗೋಸ್ಕರ ಪ್ರಜಾಪ್ರಭುತ್ವದ ತತ್ವಗಳನ್ನು ಎತ್ತಿ ಹಿಡಿಯುವುದರಲ್ಲಿ ಸರ್ವ ತ್ಯಾಗಗಳನ್ನು ನಮ್ಮ ಹಿರಿಯರು ಮಾಡಿದ್ದಾರೆ. ಅವರ ಮಾರ್ಗದರ್ಶನ ನಮಗೆಲ್ಲರಿಗೂ ಆಗಬೇಕು ಎನ್ನುವುದು ನನ್ನ ಆಸೆ. ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಆ ಮಾರ್ಗವನ್ನು ಅನುಸರಿಸಬೇಕು. ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಎಂದು ಹಾರೈಸುತ್ತೇನೆ. ಇಷ್ಟು ಹೇಳಿ. ಇವತ್ತು ತಮಗೆಲ್ಲರಿಗೂ ಪ್ರಮಾಣ ವಚನ ಬೋಧಿಸುವುದಕ್ಕೆ ನಾನು ಸಂತೋಷಪಡುತ್ತೇನೆ.

ಪ್ರಮಾಣ ವಚನ ಬೋಧಿಸತಕ್ಕಂಥ ವಿಷಯದಲ್ಲಿ ಕೆಲವು ನಿಯಮಾವಳಿಗಳಿವೆ. ಆ ನಿಯಮಾವಳಿಗಳನ್ನು ಪಾಲಿಸಬೇಕೆಂದು ತಮ್ಮಲ್ಲಿ ಕೇಳುತ್ತೇನೆ. ಮೊಟ್ಟಮೊದಲು ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಬೇಕು. ಅದಾದ ನಂತರ ವಿಧಾನಸಭಾ ಅಧ್ಯಕ್ಷ ಸ್ಥಾನಕ್ಕೆ ನಿಯೋಜಿತವಾದ ಶ್ರೀ ಜಗದೀಶ್ ಶೆಟ್ಟರ್‌ರವರು

ಬರುತ್ತಾರೆ. ತದನಂತರ ವಿರೋಧ ಪಕ್ಷದಲ್ಲಿರುವ ಪ್ರಮುಖ ಪಕ್ಷದ ನಾಯಕರು. ಮಂತ್ರಿಮಂಡಲದ ಸದಸ್ಯರುಗಳು. ಅಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸುವವರು ಮತ್ತು ಇತರೆ ಮಾನ್ಯ ಸದಸ್ಯರುಗಳು ಬರಬೇಕು. ಸದಸ್ಯರುಗಳ ಹೆಸರನ್ನು ಕಾರ್ಯದರ್ಶಿಯವರು ಕರೆದಾಗ ಅವರು ತಮ್ಮ ಸ್ಥಾನವನ್ನು ಬಿಟ್ಟು, ಕಾರ್ಯದರ್ಶಿಯವರ ಮೇಜಿನ ಬಲಭಾಗಕ್ಕೆ ಬಂದು ಸದಸ್ಯರು ಚುನಾಯಿತರಾದ ಬಗ್ಗೆ ನೀಡಿರತಕ್ಕ ಘೋಷಣಾ ಪತ್ರವನ್ನು ಕಾರ್ಯದರ್ಶಿಯವರಿಗೆ ತೋರಿಸತಕ್ಕದ್ದು. ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನದ ಪ್ರತಿ ಮಾನ್ಯ ಸದಸ್ಯರಿಗೆ ನೀಡಲಾಗುವುದು. ಸದಸ್ಯರು ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸುವ ಸಮಯದಲ್ಲಿ ಅಧ್ಯಕ್ಷರ ಪೀಠಕ್ಕೆ ಅಭಿಮುಖವಾಗಿರುವುದು. ನಂತರ ಅಧ್ಯಕ್ಷ ಸ್ಥಾನದಲ್ಲಿರುವವರ ಬಳಿಗೆ ಹೋಗಿ ಅವರಿಗೆ ಹಸ್ತಲಾಘವನ್ನು ಕೊಡುವುದು. ಸದಸ್ಯರು ಅಧ್ಯಕ್ಷ ಪೀಠದ ಹಿಂಬದಿಯಿಂದ ಮೇಜಿನ ಮತ್ತೊಂದು ಭಾಗಕ್ಕೆ ಬಂದು. ಅಲ್ಲಿರುವ ಸದಸ್ಯರ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡುವುದು. ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡಿದ ನಂತರ ಸದಸ್ಯರುಗಳು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು.

ಈಗ ಒಂದು ಪ್ರಕಟನೆಯನ್ನು ಮಾಡುತ್ತಿದ್ದೇನೆ.